# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಯಲಹಂಕ ವಲಯ, ವಿದ್ಯಾರಣ್ಯಪುರ**

ಸಂ. ನೋ.ಅ/ಬಿ.ಬಿ.ಎಂ.ಪಿ/ವಿ–14 /ಪಿಆರ್ ನಂ/09/2022–23

ವಿದ್ಯಾರಣ್ಯಪುರ ವಾರ್ಡ್ ಕಛೇರಿ
ಇಂದಿರಾ ಕ್ಯಾಂಟೀನ್ ಪಕ್ಕ,
ಹೆಚ್.ಎಂ.ಟಿ ಲೇಔಟ್, 1ನೇ ಬ್ಲಾಕ್,
ಬಿಬಿಎಂಪಿ, ಬೆಂಗಳೂರು 560097
ದಿನಾಂಕ : 20/01/2023

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020–21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 14 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 20/01/2023 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಜರುಗಿದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದವರ ಹೆಸರು | ಪದನಾಮ |
|---|---|---|
| 1 | ಶ್ರೀ ರಜನಿಕಾಂತಮಲ್ಲಿ | ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ), ಯಲಹಂಕ |
| 2 | ಶ್ರೀ ಜಯಂತಕುಮಾರ | ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು |
| 3 | ಕು॥ ಧನಲಕ್ಷ್ಮಿ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್ಬಿ |
| 4 | ಡಾ॥ ಪುಷ್ಪಲತ | ಆರೋಗ್ಯ ಇಲಾಖೆ |
| 5 | ಶ್ರೀ ಶಿವರಾಜ್ | ಆರೋಗ್ಯ ಇಲಾಖೆ |
| 6 | ಶ್ರೀ ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 7 | ಶ್ರೀ ಸಿದ್ದರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು |
| 8 | ಶ್ರೀ ರಘು | ವಿಪತ್ತು ಪರಿಣಿತರು |
| 9 | ಶ್ರೀ ಬಿ.ವಿ.ಎಸ್ ಶಾಸ್ತ್ರಿ | ದೊಡ್ಡಬೊಮ್ಮಸಂದ್ರ, ಸಾರ್ವಜನಿಕರು |
| 10 | ಶ್ರೀ ಎಸ್.ಎಲ್ ಹೆಬ್ಬಾರ್ | ಸಪ್ತಗಿರಿ ಲೇಔಟ್, ಸಾರ್ವಜನಿಕರು |
| 11 | ಶ್ರೀ ಎನ್.ಸಿ ನಾಗರಾಜ್ | ಸಪ್ತಗಿರಿ ಲೇಔಟ್, ಸಾರ್ವಜನಿಕರು |
| 12 | ಶ್ರೀ ಮನಮೋಹನ್ ಕೌಲ್ | ಸಿದ್ದಿವಿನಾಯಕ ಲೇಔಟ್, ಸಾರ್ವಜನಿಕರು |
| 13 | ಇತರೆ ಸಾರ್ವಜನಿಕರು | |

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿ ಹಿಂದಿನ ಸಭೆಯ ನಡುವಳಿಗಳನ್ನು ಚರ್ಚಿಸಿ ಇಂದಿನ ಸಭೆಯನ್ನು ನಡೆಸಲಾಯಿತು.

ದಿನಾಂಕ 20/01/2023ರಂದು ಚರ್ಚಿಸಿರುವ ಸಭಾ ನಡವಳಿ

| ಕ್ರ.ಸಂ. | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ/ಇಲಾಖೆ |
|---|---|---|---|
| 1 | ವಿರೂಪಾಕ್ಷಪುರ ವ್ಯಾಪ್ತಿಯ ಮಾರಮ್ಮ ದೇವಸ್ಥಾನದ ರಸ್ತೆ ಡಾಂಬರೀಕರಣ ಕಾರ್ಯ ನಿರ್ವಹಿಸಲು ಹಾಗೂ ಬಿ.ಇ.ಎಲ್ 1ನೇ ಬ್ಲಾಕ್‌ನ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕ್ರಮವಹಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 2 | ವಿರೂಪಾಕ್ಷಪುರ ಹಾಗೂ ದೊಡ್ಡಬೊಮ್ಮಸಂದ್ರ ವ್ಯಾಪ್ತಿಯ ಕೃಷ್ಣ ದೇವಸ್ಥಾನದ ರಸ್ತೆಯ ಅಡ್ಡರಸ್ತೆಗಳಲ್ಲಿ ಸಮರ್ಪಕವಾಗಿ ರಸ್ತೆ ಗುಡಿಸುವಿಕೆ ಕಾರ್ಯ ನಿರ್ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮವಹಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ವಿಭಾಗ |
| 3 | ಬಿ.ಇ.ಎಲ್ 6ನೇ ಬ್ಲಾಕ್, 2ನೇ ಮುಖ್ಯ ರಸ್ತೆಯಲ್ಲಿ ಹಾಳಾಗಿರುವ ವಿದ್ಯುತ್ ದೀಪಗಳನ್ನು ಸರಿಪಡಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಂಬಂದಿಸಿದ ಇಲಾಖೆಗೆ ಕ್ರಮವಹಿಸಲು ಸೂಚಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ |
| 4 | ಸಿದ್ದಿವಿನಾಯಕ ಬಡಾವಣೆಯಲ್ಲಿ ಹೊಸದಾಗಿ ರಸ್ತೆ ಮತ್ತು ಚರಂಡಿ ಕಾಮಗಾರಿ ಸಮರ್ಪಕವಾಗಿ ನಿರ್ವಹಿಸದೆ ಇರುವುದರಿಂದ ಗಮನಹರಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 5 | ಸೋಮಣ್ಣ ಗಾರ್ಡನ್, ಜಿ.ಕೆ.ವಿ.ಕೆ ರಿಂಗ್ ರಸ್ತೆಯಿಂದ ಸೋಮಣ್ಣ ಗಾರ್ಡನ್ ಹಾಗೂ ನಾರಾಯಣ ಸ್ಕೂಲ್‌ವರೆಗೆ ರಾಜಕಾಲುವೆ ಸರ್ವೇ ಕಾರ್ಯ ನಿರ್ವಹಿಸುತ್ತಿದ್ದು, ಇದರ ಮಾಹಿತಿ ನೀಡಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಂಬಂದಿಸಿದ ಇಲಾಖೆಗೆ ಕ್ರಮವಹಿಸಲು ಸೂಚಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ನೀರು ಗಾಲುವೆ ವಿಭಾಗ |

ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಾಗುವುದು ಹಾಗೂ ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡ ಬಗ್ಗೆ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನೋಡೆಲ್ ಅಧಿಕಾರಿಗಳು
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು